# ಪದವಿ ಪೂರ್ವ ಶಿಕ್ಷಣ ಇಲಾಖೆ
# ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ 2022(ಏಪ್ರಿಲ್-ಮೇ)
# ಕನ್ನಡ (01)
# ಮೌಲ್ಯಮಾಪನದ ಕೀಲಿಕೈ ಉತ್ತರಗಳು

| ಪ್ರ. ಸಂ | ಕೀಲಿಕೈ ಉತ್ತರಗಳು | ಅಂಕಗಳು |
|---|---|---|
| 1. | ಕೂಡಲಸಂಗಮದೇವ | 1 |
| 2. | ದ್ರೌಪದಿಯನ್ನು | 1 |
| 3. | ಬಿನ್ನಾಣದ ಮಾತಿಗೆ | 1 |
| 4. | ಬೇವಿನ ಮರ | 1 |
| 5. | ಬರಬ್ಬನ ವಕಾಲತ್ತು | 1 |
| 6. | ರುದ್ರಪ್ಪ | 1 |
| 7. | ಪೊಣಚ್ಚಿ | 1 |
| 8. | ಮೂತ್ರಪಿಂಡದಲ್ಲಿ ಕಲ್ಲು ಇರುವ ಸ್ಥಳವೇನಾದರೂ ಚಲಿಸಿದ್ದರೆ ತಿಳಿಯಲೆಂದು | 1 |
| 9. | ಕನ್ನಡಿಗರು | 1 |
| 10. | ಕೊನೆಯಿಲ್ಲದಷ್ಟು ಪ್ರಶ್ನೆಗಳನ್ನು ಕೇಳುವವರು ಮಕ್ಕಳಾದ್ದರಿಂದ | 1 |
| 11. | ಕೊಡಲಿಯನ್ನು | 1 |
| 12. | ಗೂಳೂರು ಮಠದಲ್ಲಿ | 1 |
| 13. | ಜುಬೇದಾಳನ್ನು | 1 |
| 14. | ಪುಟ್ಟಯ್ಯ | 1 |
| 15. | ಆನೆಯಿಂದ ಐದು ಜನರಿಗೆ ಸಾವೆಂದು | 1 |
| 16. | ನಿಮಗೆ ಇಂತಹ ಅವಮಾನ ಮಾಡಿದ ಅಂಗದಾದಿಗಳನ್ನು ಭ್ರೂಭಂಗ ಮಾತ್ರದಲ್ಲಿ ಸೆರೆಹಿಡಿದು ತಂದು, ನಿಮ್ಮೆದುರು ಬಹುವಿಧವಾಗಿ ಶಿಕ್ಷಿಸುತ್ತೇನೆಂದು | 2 |
| 17. | ಸೂರ್ಯನಿಂದ ಹಗಲಿನ ಅನುಭವ, ದೀಪದಿಂದ ಬೆಳಕಿನ ಅನುಭವ | 2 |
| 18. | ಯುಧಿಷ್ಠಿರ, ಭೀಮ, ಅರ್ಜುನ, ನಕುಲ ಮತ್ತು ಸಹದೇವ | 2 |
| 19. | ಯಾರು ಏನೆಂದರೂ ಕೋಪಿಸಿಕೊಳ್ಳದವನು ರಾಜನಾಗಲು, ನಾನಾ ಚಮತ್ಕಾರಗಳನ್ನು ಬಲ್ಲವನು ಮಂತ್ರಿಯಾಗಲು ಅರ್ಹರು | 2 |
| 20. | ಉತ್ತಮರ ಗೆಳೆತನ ಬಂಗಾರದ ಪುತ್ಥಳಿ ಹಾಗೆ, ಮತಿಹೀನರ ಗೆಳೆತನ ಹಿತ್ತಾಳೆಗಿಂತ ಬಲುಹೀನ | 2 |
| 21. | ಕ್ರಿಸ್ಮಸ್ ಮನೆಗೆ ಕೇಕು, ಚಳಿ, ನಕ್ಷತ್ರದೀಪಗಳನ್ನು,ಮಂಜು ಹತ್ತಿಯ ರೂಪ ತಾಳಿದ ಪ್ಲಾಸ್ಟಿಕ್ನ ಕ್ರಿಸ್ಮಸ್ ಮರವನ್ನು ಹೊತ್ತು ತಂದಿದೆ. | 2 |
| 22. | ಮಗುವಿಗೆ ಮೈಯಲ್ಲಿ ಸರಿಯಿಲ್ಲ, ಕೆಮ್ಮು ಹೋಗುತ್ತಲೇ ಇಲ್ಲ. ಶಿವನೂರು ಸ್ವಾಮಿಗಳಿಗೆ ತೋರಿಸಬೇಕು ಎಂದು ಹೆಂಡ್ತಿ ಸಿದ್ಲಿಂಗಿ ಹೇಳುತ್ತಲೇ ಇದ್ದಳು | 2 |
| 23. | ವೃಕ್ಷವಾಸಿಗಳಾದ ಸಿಂಹಬಾಲದ ಕೋತಿಗಳು ನೆಲೆ ಕಳೆದುಕೊಂಡಿವೆ. ಕಾಡಿನ ನಾಶದಿಂದ ಮರದಿಂದ ಮರಕ್ಕೆ ಹಾರುವಂತಿಲ್ಲ. ನೆಲಕ್ಕೆ ಇಳಿದು ರಸ್ತೆ ದಾಟಿ ಮತ್ತೊಂದು ಮರ ಹತ್ತುವ ಪರಿಸ್ಥಿತಿಯಲ್ಲಿ ವಾಹನಕ್ಕೆ ಸಿಲುಕಿ ಅಂಗವಿಕಲಗೊಂಡಿವೆ. ಕೆಂಪು ಪಟ್ಟಿಯಲ್ಲಿರುವ ಇವು ವಂಶನಾಶದ ಅಂಚಿನಲ್ಲಿವೆ. | 2 |
| 24. | ಮುದ್ದೇಗೌಡರು ಪಥ್ಯದ ವಿಚಾರವಾಗಿ ನಿರ್ಲಕ್ಷ್ಯ ವಹಿಸಿದ್ದರು. ಅವರು” ಅಯ್ಯೋ ಅದೆಲ್ಲಾ ಪಥ್ಯ ಯಾರು ಮಾಡೋಕಾಗುತ್ತೆ ಬಿಡಿ. ಬಾಡು ತಿನ್ಬೇಡಿ, ಹಾಲಿನ ಪದಾರ್ಥಗಳನ್ನು ತಿನ್ಬೇಡಿ, ಸದಾ ನೀರು ಕುಡೀಬೇಕು ಅಂತಾರೆ, ಅದನ್ನೆಲ್ಲಾ ಯಾರು ಮಾಡ್ತಾರೆ” ಎನ್ನುತ್ತಿದ್ದರು. | 2 |

| | | |
|---|---|---|
| 25. | ಕೇಂದ್ರ ಸರ್ಕಾರದ ಎಲ್ಲ ಸೂಚನೆಗಳು, ಎಲ್ಲಾ ಫಾರಂಗಳು, ಎಲ್ಲಾ ಬರವಣಿಗೆಯ ವ್ಯವಹಾರಗಳು ಕ್ರಮವಾಗಿ ಪ್ರಾದೇಶಿಕ ಭಾಷೆ, ಹಿಂದಿ ಮತ್ತು ಇಂಗ್ಲೀಷ್ ಗಳಲ್ಲಿರಬೇಕು. ಇದೇ ತ್ರಿಭಾಷಾ ಸೂತ್ರದ ಬಳಕೆ. | 2 |
| 26. | ಕಲಾಂ ಅವರ ದೃಷ್ಟಿಯಲ್ಲಿ ಕನಸುಗಳು ಆಲೋಚನೆಗಳಾಗುತ್ತವೆ, ಆಲೋಚನೆಗಳು ಸೃಜನಾತ್ಮಕ ಕ್ರಿಯೆಗಳಾಗಿ ಪರಿವರ್ತನೆಗೊಳ್ಳುತ್ತವೆ | 2 |
| 27. | ವೇಲಾಯುಧ ದಿನದ ಇಪ್ಪತ್ತನಾಲ್ಕು ಗಂಟೆಯೂ ಕುಡಿದೇ ಇರುತ್ತಿದ್ದ, ಮಠದ ಸಾತ್ವಿಕ ವಾತಾವರಣಕ್ಕೆ ದೊಡ್ಡ ತಲೆನೋವಾಗಿದ್ದ. | 2 |
| 28. | ಲಾರಿ ಮತ್ತು ನಾಟಾಗಳಿಗೆ ಕಟ್ಟಿದ್ದ ಹಗ್ಗ ಬಿಚ್ಚದೆ ವೇಲಾಯುಧ ಲಾರಿಯಲ್ಲಿದ್ದ ನಾಟಾಗಳನ್ನು ತಳ್ಳಲು ಆನೆಗೆ ಹೇಳಿದ್ದರಿಂದ ನಾಟಾ ಸಮೇತ ಲಾರಿ ಉರುಳಿಬಿದ್ದು ಕ್ಯಾಬಿನ್ನಿನ ಮೇಲಿದ್ದ ಮಣಭಾರದ ಜ್ಯಾಕ್ ಧೊಪ್ಪನೆ ಡ್ರೈವರನ ತಲೆ ಮೇಲೆ ಬಿದ್ದು ತಲೆ ಜಜ್ಜಿ ಹೋಯಿತು. ಇದಕ್ಕೆ ಆನೆ ನೇರವಾಗಿ ಕಾರಣವಲ್ಲ. | 2 |
| 29. | ಹುಚ್ಚು ನಾಯಿಗಳಿಗೆ ಧೈರ್ಯದ ಪ್ರಶ್ನೇನೆ ಬರೋಲ್ಲ, ಅವಕ್ಕೆ ತಲೆಕೆಟ್ಟು ಕಂಡಕಂಡಿದ್ದಕ್ಕೆಲ್ಲಾ ಕಚ್ಚುತ್ತವೆ,ಆಸ್ಪತ್ರೆಗೆ ತೆಗೆದುಕೊಂಡು ಬಂದಾಗ ಮೇಜು,ಕುರ್ಚಿಗಳ ಕಾಲೆಗೆಲ್ಲಾ ಕಚ್ಚುತ್ತವೆ ಎಂದು | 2 |
| 30. | "ಅದೇನ್ಮಾಡುತ್ತೆಯ್ಯಾ, ಎಲ್ಲೋ ಕಂಬದ ಮೇಲೆ ಸತ್ತಿರೋ ತಿಪ್ಪಣ್ಣನಿಗೂ, ಎಲ್ಲೋ ಓಡಾಡಿಕೊಂಡಿರೋ ಆನೆಗೂ ಕಟ್ಟೀರಲ್ಲಯ್ಯ, ಬಾಯಿಲ್ಲದೋರು ಈ ಪ್ರಪಂಚದಲ್ಲಿ ಬದುಕೋ ಹಂಗೆ ಇಲ್ಲವೇನಯ್ಯ? ಎಂದು | 2 |
| 31. | "ಆನೆಯ ಕಾಲಿನ ಉಗುರುಗಳ ಬಳಿ ಅಂಕುಶದಿಂದ ತಿವಿದರೆ ಅದಕ್ಕೆ ಪ್ರಾಣವೇ ಹೋಗುವಷ್ಟು ನೋವಾಗುತ್ತದೆಂದೂ,ಆ ಭಯಂಕರ ನೋವಿಗೆ ಎಂಥ ಪುಂಡು ಆನೆಯಾದರೂ ನಾಲ್ಕು ಸಾರಿ ತಿವಿಯುವುದರೊಳಗೆ ಶರಣಾಗಿ ನೆಲದ ಮೇಲೆ ಮಲಗಿ ಬಿಡುತ್ತದೆಂದೂ" ವೇಲಾಯುಧನ ಅಪ್ಪ ತಿಳಿಸಿದ್ದನು | 2 |
| | ಕವಿ,ಪದ್ಯದ ಹೆಸರಿಗೆ 1 ಅಂಕ, ವಾಕ್ಯಬಳಕೆಯ ಸಂದರ್ಭದೊಂದಿಗೆ ಸ್ವಾರಸ್ಯ ವಿವರಣೆಗೆ 2 ಅಂಕ | |
| 32. | ನಾಗಚಂದ್ರನ - "ಕದಡಿದ ಸಲಿಲಂ ತಿಳಿವಂದದೆ" ಪದ್ಯಭಾಗ. ಸೀತೆಯ ಬಗೆಗೆ ಕರುಣೆ ಅನುಕಂಪಗಳು ಹುಟ್ಟಿ ರಾವಣನು ವೈರಾಗ್ಯ ಭಾವ ತಾಳಿದ ಸಂದರ್ಭ. ಕವಿಯು ರಾವಣನ ಮನಃಪರಿವರ್ತನೆಯನ್ನು ಶ್ಲಾಘಿಸುವ, ಉದಾತ್ತನನ್ನಾಗಿ, ಮಹಾನುಭಾವನನ್ನಾಗಿ ವರ್ಣಿಸಿರುವ ಪರಿ | 3 |
| 33. | ಕುಮಾರವ್ಯಾಸನ "ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು" ಪದ್ಯಭಾಗ. ದ್ರೌಪದಿಯು ಕೀಚಕನಿಂದಾದ ಅವಮಾನವನ್ನು ತನ್ನ ಗಂಡಂದಿರಲ್ಲಿ ಅರುಹಲು ಚಿಂತಿಸುವ ಸಂದರ್ಭ. ಕೀಚಕನಾಯನ್ನು ಕೊಲ್ಲುವ ಸಾಮರ್ಥ್ಯ ಹಾಗೂ ತನ್ನ ದುಃಖಕ್ಕೆ ಸ್ಪಂದಿಸುವ ಗುಣವುಳ್ಳ ಗಂಡಂದಿರ ಮನಃಸ್ಥಿತಿಗಳನ್ನು ಅಳೆಯುತ್ತಾ ದ್ರೌಪದಿಯು ಕಲಿಭೀಮನ ಮಿಡುಕುಳ್ಳ ಸ್ವಭಾವದ ಬಗ್ಗೆ ನಂಬಿಕೆಯಿಡುವ ಚಿತ್ರಣ. | 3 |
| 34. | ಪುರಂದರದಾಸರ "ಜಾಲಿಯ ಮರದಂತೆ" ಕೀರ್ತನೆ.<br>ಜಾಲಿಯ ಮರದ ಗುಣಗಳನ್ನು ದುರ್ಜನರ ಸ್ವಭಾವದೊಂದಿಗೆ ಹೋಲಿಸುವ ಸಂದರ್ಭ. ಜಾಲಿಯ ಮರ ತನ್ನ ಸುತ್ತಲಿನ ಪರಿಸರಕ್ಕೆ ಹೂವಿನ ಪರಿಮಳವನ್ನು, ದಣಿದು ಬಂದವರಿಗೆ ನೆರಳನ್ನು ನೀಡದೆ ಹೇಗೆ ನಿರುಪಯುಕ್ತವೋ ಹಾಗೆ ದುರ್ಜನರೂ ಸಹ ತಮ್ಮ ಸುತ್ತಲಿನ ಸಮಾಜಕ್ಕೆ ಹಿತವಾದವರಲ್ಲ, ಅವರ ಬಳಿ ಯಾರೂ ಸೇರುವದಿಲ್ಲ ಎಂದಿದ್ದಾರೆ ದಾಸರು ಸೂಚ್ಯವಾಗಿ | 3 |
| 35. | ಜನಪದ ತ್ರಿಪದಿ "ಹಬ್ಬಲಿ ಅವರ ರಸಬಳ್ಳಿ".<br>ತಾಯಿಯ ಮಹತ್ವವನ್ನು ಜನಪದ ಹೆಣ್ಣುಮಗಳೊಬ್ಬಳು ಜ್ಯೋತಿಗೆ ಹೋಲಿಸಿ ಹಾಡಿ ಹೊಗಳುವ ಸಂದರ್ಭ. ಒಲೆಯಲ್ಲಿ ಉರಿಯುವ ಸಾವಿರ ಕೊಳ್ಳಿಗಳಿಗಿಂತ ಮನೆಬೆಳಗುವ ಜ್ಯೋತಿ ಮಿಗಿಲು ಎಂಬ ಭಾವ. | 3 |

| | | |
|---|---|---|
| 36. | ಡಾ\|\|ಹಾಮಾನಾಯಕ - "ಕನ್ನಡವನ್ನು ಕಟ್ಟುವ ಕೆಲಸ".<br>ಎಲ್ಲ ಭಾಷೆಗಳ ಅರಿವಿನ ಮಹತ್ತ್ವವನ್ನು ಲೇಖಕರು ಒತ್ತಿ ಹೇಳುವ ಸಂದರ್ಭ. ಇನ್ನೂ ಹಲವು ಭಾಷೆಗಳ ಅಗತ್ಯವನ್ನು ವರವೆಂದು ಹೇಳುತ್ತಲೇ ಆ ಬೇರೊಂದು ಭಾಷೆ ನಮ್ಮ ಭಾಷೆಯ ಬದಲಿಗಲ್ಲ ಎನ್ನುವ ಲೇಖಕರ ಪ್ರತಿಪಾದನೆ ಗಮನಾರ್ಹ. | 3 |
| 37. | ಡಾ\|\|ಎಚ್ ನಾಗವೇಣಿ - "ಧಣಿಗಳ ಬೆಳ್ಳಿಲೋಟ".<br>ಕತೆಗಾರ್ತಿಯು ಶಾಂಭವಿ ಹೊಳೆಯು ಚಿನ್ನಮ್ಮನ ಕುಟುಂಬಕ್ಕೆ ಮಾಡಿರುವ ಉಪಕಾರವನ್ನು ಕುರಿತು ವಿವರಿಸುವ ಸಂದರ್ಭ.ಚಿನ್ನಮ್ಮ ಹೊಳೆಯು ತನ್ನ ಕುಟುಂಬಕ್ಕೆ ಹೊರಿಸಿದ ಅಪವಾದವನ್ನು ಶಪಿಸುತ್ತಾ ಹೊಳೆಯ 'ಗುಣವಾಚನ'ಕ್ಕೆ ತೊಡಗಿದ ಸಮಯದಲ್ಲಿ ಕತೆಗಾರ್ತಿಯು ಹೊಳೆಯ ಉಪಕಾರಗುಣವನ್ನು ತಾಳೆ ಹಾಕುತ್ತಾ ಚಿನ್ನಮ್ಮನ ಕುಟುಂಬಕ್ಕೆ ಅದಕ್ಕಿರುವ ಪ್ರೀತಿ ವಿಶ್ವಾಸವನ್ನು ವಿಶ್ಲೇಷಿಸುತ್ತಾರೆ. | 3 |
| 38. | ಪ್ರೊ. ಎಚ್ ಆರ್ ರಾಮಕೃಷ್ಣರಾವ್ – ಬದುಕನ್ನು ಪ್ರೀತಿಸಿದ ಸಂತ<br>ಕಲಾಂ ಅವರನ್ನು ಭೇಟಿಯಾದ ಸಂದರ್ಭದಲ್ಲಿ ಮಕ್ಕಳು ಕೇಳುತ್ತಿದ್ದ ಪ್ರಶ್ನೆಯಿದು.ಕಲಾಂ ಅವರ ಉತ್ತರವೂ ಯಶಸ್ಸಿನ ಪಂಚಾಕ್ಷರಿ ಮಂತ್ರದಂತಿರುತ್ತಿತ್ತು. ಕುತೂಹಲ, ಆಲೋಚನಾಶಕ್ತಿ, ಜ್ಞಾನ, ಕಷ್ಟಪಟ್ಟು ಕೆಲಸ ಮಾಡುವುದು ಮತ್ತು ಗುರಿ ಸಾಧಿಸುವ ಛಲ ಎಂಬ ಮಕ್ಕಳ ಯಶಸ್ಸಿನ ಗಾಯತ್ರಿ ಮಂತ್ರ. | 3 |
| 39. | ಕೆ.ಪಿ.ಪೂರ್ಣಚಂದ್ರತೇಜಸ್ವಿ – ಕೃಷ್ಣೇಗೌಡನ ಆನೆ<br>ಎಲ್ಲ ವ್ಯವಹಾರಗಳನ್ನು ಮಾಡಿ ನಷ್ಟ ಅನುಭವಿಸಿದ್ದ ಕೃಷ್ಣೇಗೌಡ ಗೂಳೂರು ಮಠದಿಂದ ಆನೆಯನ್ನು ಕರೆತಂದ ಸಂದರ್ಭದಲ್ಲಿ ಜನರಾಡಿಕೊಂಡ ಮಾತಿದು. ಆನೆ ಸಾಕುವುದು – ಎಲೆಕ್ಷನ್ನಿಗೆ ನಿಲ್ಲುವುದು ಎರಡೂ ಸಂದರ್ಭಗಳು ಕೈಹಿಡಿಯದಿದ್ದರೆ ದಿವಾಳಿಯಾಗುವ ಸಾಂಕೇತಿಕತೆ | 3 |
| 40. | ಕೆ.ಪಿ.ಪೂರ್ಣಚಂದ್ರತೇಜಸ್ವಿ – ಕೃಷ್ಣೇಗೌಡನ ಆನೆ<br>ಮರ ತಾನು ಕಡಿದಿಲ್ಲವೆಂದು ಆನೆ ಮರ ಬೀಳಿಸಿತೆಂದು ದುರ್ಗಪ್ಪ ಹಳೇ ರಾಗವನ್ನು ಎಳೆದ ಸಂದರ್ಭದಲ್ಲಿ ಫಾರೆಸ್ಟರ್ ಆಫೀಸರ್ ನಾಗರಾಜ ಹೇಳುವ ಮಾತಿದು. ಬರವಣಿಗೆಯಲ್ಲಿ ಹೇಳಿ ಕೊಟ್ಟರೆ ಆನೆಯ ಮೇಲೂ ಕ್ರಮ ಕೈಗೊಳ್ಳುವ ನಾಗರಾಜನ ದರ್ಪದ ನಡವಳಿಕೆಯ ಚಿತ್ರಣ | 3 |
| 41. | ಕೆ.ಪಿ.ಪೂರ್ಣಚಂದ್ರತೇಜಸ್ವಿ – ಕೃಷ್ಣೇಗೌಡನ ಆನೆ<br>ಜಂಕ್ಷನ್ ಬಾಕ್ಸ್ ಇದ್ದ 17ನೇ ಕಂಬದ ಮೇಲೆ ರಪೇರಿ ಭಂಗಿಯಲ್ಲೇ ಇದ್ದ ತಿಪ್ಪಣ್ಣನನ್ನು ಕೂಗಿ ಕರೆದರೂ ಪ್ರತಿಕ್ರಿಯೆ ಬಾರದಿದ್ದ ಸಂದರ್ಭದಲ್ಲಿ ಲೈನ್ ಶಂಕ್ರಪ್ಪ ಇಂಜಿನಿಯರ್ ರಮೇಶ್ ಬಾಬುಗೆ ಹೇಳುವ ಮಾತಿದು. ಶಂಕ್ರಪ್ಪನ ಕಾತರ ಕಳವಳ, ಪರಿಸ್ಥಿತಿಯ ಗಂಭೀರತೆ, ಸಹೋದ್ಯೋಗಿಯ ಸಾವನ್ನು ಸಹಜವಾಗಿ ಸಖೇದಾಶ್ಚರ್ಯಗಳಿಂದ ಸ್ವೀಕರಿಸುವ ಮನಃಸ್ಥಿತಿ. | 3 |
| 42. | ಕಾಪಾಡಬೇಕಾದವರು ಕೊಲ್ಲುವ ಸಂಚು ಹೂಡಿದಾಗ ಇನ್ನಾರೂ ಕಾಯಲಾರರೆಂಬ ವಾಸ್ತವಸತ್ಯವನ್ನು ಹಲವು ರೂಪಕಗಳ ಮೂಲಕ ಚಿತ್ರಿಸಿರುವ ವಚನಕಾರ ಬಸವಣ್ಣ. ನಮಗೆ ಆಸರೆಯ ತಾಣ ನಾವು ನಿಂತ ನೆಲವೇ ಹೊತ್ತಿ ಉರಿದರೆ, ನೀರನ್ನು ಕಾಪಿಡುವ ಏರಿಯೇ ನೀರೆಲ್ಲವನ್ನೂ ಹೀರಿಕೊಂಡರೇ,ಬೆಳೆಯನ್ನು ರಕ್ಷಿಸುವ ಬೇಲಿಯೇ ಬೆಳೆಯೆಲ್ಲವನ್ನೂ ಮೇಯ್ದರೆ, ಮನೆಯನ್ನು ಪಾಲಿಸಬೇಕಾದ ಗೃಹಿಣಿ ತಾನೇ ಕಳ್ಳಿಯಾದರೇ,ಮಗುವಿಗೆ ಅಮೃತವಾಗಬೇಕಾದ ತಾಯಿಯ ಎದೆಹಾಲು ನಂಜಾಗಿ ಕೊಲ್ಲುವಂತಾದರೆ ರಕ್ಷಿಸಲು ಇನ್ನಾರಿಗೂ ಸಾಧ್ಯವಿಲ್ಲ. ಈ ಎಲ್ಲ ವಿಘಟನೆಗಳು ಕಾಯುವ ದೈವದ ಕೊಲ್ಲುವ ಬುದ್ಧಿಗೆ ನಿದರ್ಶನ. | 4 |

| | | |
|---|---|---|
| **43.** | **ಒಂದು - ಪಾಪಿ ಕೌರವನು ದ್ಯೂತ ಪ್ರಸಂಗದಲ್ಲಿ ದ್ರೌಪದಿಯ ಮುಂದಲೆ ಹಿಡಿದು ತರಿಸಿ ವಸ್ತ್ರಾಪಹರಣ ಮಾಡಿಸಿದ್ದು,ಎರಡು – ಅರಣ್ಯವಾಸದಲ್ಲಿದ್ದಾಗ ಸೈಂಧವನು ಎಳೆದೊಯ್ದು ಅವಮಾನಿಸಿದ್ದು,ಮೂರು – ಕೀಚಕನು ರಾಜಸಭೆಯಲ್ಲಿ ಎಡಗಾಲಿನಿಂದ ಒದ್ದು ಬೀಳಿಸಿದ ಅಪಮಾನಗಳು - ವಿವರಣೆಯೊಂದಿಗೆ.** | **4** |
| **44.** | **ಕಹಿಬೇವಿನ ಎಲೆ ಚಿಗುರೆಂದು,ವಿಷಕಾರುವ ಚೇಳು ಚಿಕ್ಕದೆಂದು,ಹಾಲು ಕುಡಿದ ಹಾವನ್ನು ವಿಶ್ವಾಸಿಯೆಂದು,ಪಕ್ಷಿ ಸಾಕುವ ಅಪೇಕ್ಷೆಯಿಂದ ಗೂಬೆಮರಿಯನ್ನು ಸಾಕುವುದು, ಶತ್ರುವನ್ನು ಬಾಲಕನೆಂದೂ ಉಪೇಕ್ಷಿಸಬಾರದೆಂದು ಸೋಮನಾಥನು ತಿಳಿಸಿದ್ದಾನೆ. (ವಿವರಣೆಯೊಂದಿಗೆ)** | **4** |
| **45.** | **ತಂದೆ ತಾಯಿಗಳು ಪ್ರೀತಿ ವಾತ್ಸಲ್ಯಗಳ ಬದಲಿಗೆ ಕೃತಕವಾಗಿ, ಜವಾಬ್ದಾರಿಯನ್ನು ನಿರ್ವಹಿಸುವ ಯಂತ್ರಗಳಂತೆ ಗೋಚರ, ತಾಯಿ – ಸಾವಿರ ಗಾಲಿ ಉರುಳುವ ರಸ್ತೆಯಂಚಿನಲ್ಲಿ ಕೈ ಹಿಡಿದು ನಡೆಸಿದವಳು,ಇರುವ ಒಂದಿಂಚು ಕೋಣೆಯಲ್ಲಿ ಹೊರಲೋಕವನ್ನು ಪರಿಚಯಿಸಿ,ಎಚ್ಚರಿಕೆ ಕೊಡುವ, ಯಾಂತ್ರಿಕ ಕರ್ತವ್ಯಪಾಲಕಿ.ತಂದೆ – ಬೆಳಗಿನಿಂದ ಸಂಜೆಯ ತನಕ ಕಣ್ಮರೆಯಾಗಿ ಒಮ್ಮೊಮ್ಮೆ ರಜಾದಿನಗಳಲ್ಲಿ ಕಣ್ಣಿಗೆ ಕಂಡು ಕುಳಿತು ಕೆಮ್ಮುವ ಪ್ರಾಣಿಯಾಗಿ ಗೋಚರಿಸುತ್ತಾನೆಯೇ ಹೊರತು ವ್ಯಕ್ತಿತ್ವ ರೂಪಿಸುವ ಮಾದರಿ ಅಪ್ಪನಾಗಿ ಅಲ್ಲ.** | **4** |
| **46.** | **ಮಾನವತೆ, ಪ್ರೀತಿ, ವಿಶ್ವಾಸ, ಅನುಕಂಪಗಳು ಮಾಯವಾಗುತ್ತಿರುವ ಸ್ಥಳಗಳಲ್ಲಿ, ಚರ್ಚು, ಮಸೀದಿ, ದೇವಸ್ಥಾನ, ಮಠಗಳಲ್ಲಿ ಮತದ ಮತಿರಹಿತ ಹಠಗಳಲ್ಲಿ, ಕೋರ್ಟು,ಕಾರ್ಖಾನೆ, ಠಾಣೆಗಳಲ್ಲಿ, ಕಣ್ಬೆಳಕ ಕಿತ್ತೆಸೆದ ಬಂದೀಖಾನೆಗಳಲ್ಲಿ, ಆಸ್ಪತ್ರೆಯ ಕೋಣೆಗಳಲ್ಲಿ, ತಿಂಗಳಿಗೊಮ್ಮೆ ಹಣತೆ ಹಚ್ಚುವ ದಲಿತರ ಸೋಗೆ ಬಿಲಗಳಲ್ಲಿ,ಶೋಷಿತರ ಕಂಬನಿಯನ್ನೊರೆಸುವ ಸತ್ಯದ ಹಾದಿಯನ್ನು ತೆರೆಸುವ ಸಲುವಾಗಿ,ದೈವೀರಾಜ್ಯದ ಸಾಕಾರಕ್ಕಾಗಿ ದಿನನಿತ್ಯ ಜೀಸಸ್ ಶಿಲುಬೆಗೇರಿದ್ದಾನೆ.** | **4** |
| **47.** | **ಉಳುವುದ ನಾಲ್ಕು ದಿನ ತಡ ಮಾಡಿದರೆ ಕುಳ ನೆಲದಲ್ಲಿ ನಾಟುವುದಿಲ್ಲವೆಂಬ ಸಮಸ್ಯೆ, ಎರಡು ಎತ್ತುಗಳಲ್ಲಿ ಒಂದು ನೊಗ ಇಟ್ಟೊಡನೆ ಮಲಗಿಬಿಡುತ್ತದೆ, ಇನ್ನೊಂದು ಅದರಂತೆ ಆಗುವ ಸೂಚನೆಗಳಿವೆ, ಅವುಗಳನ್ನು ಸಾಟಿ ಮಾಡಿ ಬೇರೆ ಎತ್ತುಗಳನ್ನು ತರುವ ಯೋಚನೆ,ಆದರೆ ಅದಕ್ಕೆ ಬೇಕಾದ ಸುಳ್ಳು,ಛಾತಿ,ಮಾತುಗಾರಿಕೆ ಅವನಿಗಿರಲಿಲ್ಲ. ಈ ನಡುವೆ ಅವನ ಮಗುವಿಗೆ ಮೈಸರಿಯಿರಲಿಲ್ಲ, ಕೆಮ್ಮು ಹೋಗದೆ ಶಿವನೂರು ಸ್ವಾಮಿಗಳಿಗೆ ತೋರಿಸಬೇಕೆಂದು ಹೆಂಡ್ತಿ ಸಿದ್ಲಿಂಗಿ ಹೇಳುತ್ತಿದ್ದಳು, ಈ ಎಲ್ಲದರ ನಡುವೆ ಬಸಲಿಂಗನ ಎಡಗಣ್ಣಿನಲ್ಲಿ ಕಾಣಿಸಿಕೊಂಡ ನೋವು ಹೆಚ್ಚಾಗುತ್ತಲೇ ಹೋಯಿತು.** | **4** |
| **48.** | **ಮಾರ್ಷ್ ಗೆ ಮೊದಲಿಗೆ ತಾನು ಬಂದ ದಾರಿ ತಿಳಿಯದೆ ತನ್ನ ಹುಚ್ಚು ಸಾಹಸದ ಗಂಭೀರತೆ ಅರಿವಾಗುತ್ತದೆ. ನಂತರ ಕಾಡಿನ ಹಾಡಿಯೊಂದರ ಪೂಣಚ್ಚಿ ಎಂಬ ಆದಿವಾಸಿಯ ಸ್ನೇಹ ಗಳಿಸಿ, ಸ್ಥಳೀಯರ ವಿಶ್ವಾಸ ಸಂಪಾದಿಸಿ, ಇಡೀ ಪ್ರದೇಶದ ನಕ್ಷೆ ತಯಾರಿಸಿ, ಆಗಷ್ಟೇ ಭಾರತ ಪ್ರವೇಶಿಸಿದ್ದ ಚಹಾ ಗಿಡಗಳನ್ನು ತಂದು ನೆಟ್ಟನು. ನಿಧಾನವಾಗಿ ಕಾಡು ಕಡಿಯುತ್ತಾ,ಚಹಾ ಗಿಡಗಳನ್ನು ಪಳಗಿಸುತ್ತಾ, ತೋಟವನ್ನು ವಿಸ್ತರಿಸುತ್ತಾ ನೆಲೆಯೂರಿದನು.** | **4** |
| **49.** | **ಸೀತಾಗೆ ಓದಿನಲ್ಲಿ ಆಸಕ್ತಿಯಿರಲಿಲ್ಲ. ಗೆಳೆತಿಯರೊಂದಿಗೆ ಸಿನಿಮಾ, ಮಾರ್ಕೆಟ್ ಎಂದು ಸುತ್ತುವ ಗುಣ,ವಿವಾಹದ ನಂತರ ಗಂಡನ ಮನೆಗೆ ಹೊಂದಿಕೊಳ್ಳದೆ ಸುಮ್ಮನೆ ದೂರುವ, ಎಲ್ಲವೂ ತಟ್ಟನೆ ಸರಿ ಹೋಗಿ ಬಿಡಬೇಕೆಂಬ ಸ್ವಭಾವ. ಕೈತುಂಬ ಸಂಪಾದಿಸಿ ಹೆಂಡತಿಯನ್ನು ಚೆನ್ನಾಗಿ ನೋಡಿಕೊಳ್ಳುವುದು ಗಂಡನ ಜವಾಬ್ದಾರಿ ಎಂದು ನಂಬಿದವಳು. ಕಷ್ಟಪಟ್ಟು ಓದಿ ಕೆಲಸ ಸಂಪಾದಿಸಿ ದುಡಿಯುತ್ತಿದ್ದ ಲೇಖಕಿಯನ್ನು ಕಂಡು ಹಲುಬುವ, ದುಡಿದು ಗಳಿಸದೆ ಸುಖವಾಗಿರಬೇಕೆಂಬ ಸ್ವಭಾವದ ವ್ಯಕ್ತಿ. ಬದುಕನ್ನು ಅದೃಷ್ಟದಾಟದಂತೆ ಕಂಡು** | |

| | | |
|---|---|---|
| | ದುರಂತದಲ್ಲಿ ಕೊನೆಗೊಳಿಸಿಕೊಂಡವಳು. | |
| 50. | ಚಿನ್ನಮ್ಮ ಬೆಳ್ಳಿಲೋಟವನ್ನು ಮತ್ತೆ ಮತ್ತೆ ತಿರುಗಿಸಿ ನೋಡುತ್ತಿದ್ದಾಗ ಆಕೆಯ ಒಡಲಲ್ಲಿ ಅದೆಷ್ಟೋ ಭಾವನೆಗಳು ಗಿರಕಿ ಹೊಡೆಯತೊಡಗಿದವು. ತನ್ನ ಕುಟುಂಬದ ಮೇಲೆ ಕಳ್ಳತನದ ಅಪವಾದ ಹೊರಿಸಿದ ಬೆಳ್ಳಿಲೋಟದ ಗುಣ ಮಣ್ಣಿಗಿಂತಲೂ ಕೀಳೆನಿಸಿತು. ಅದರಿಂದಾಗಿ ತನ್ನ ಕುಟುಂಬ ಪಟ್ಟಪಾಡು, ಪರಿತಾಪ ಮನಸ್ಸಿಗೆ ಬಂದು ಆಕೆಯ ಯೋಚನಾಶಕ್ತಿ, ವಿವೇಚನಾ ಶಕ್ತಿಗಳನ್ನೆಲ್ಲಾ ಕಸಿದುಕೊಂಡವು. ಅದುವರೆವಿಗೆ ಅನುಭವಿಸಿದ ಸಂಕಟಕ್ಕೆ ಬೆಲೆ ಕಟ್ಟಲಾಗದೆಂಬ ಭಾವನೆ, ಧಣಿಗೆ ಮರಳಿ ನೀಡಿ ಆಪಾದನೆ ಮುಕ್ತವಾಗುವುದಕ್ಕಿಂತ ಅದನ್ನು ಮತ್ತೆ ಹೊಳೆಗೇ ಎಸೆಯುವುದರಿಂದ ತನ್ನ ರೋಷವನ್ನು ಹೊರಹಾಕಲು ಬಯಸುವ ಚಿನ್ನಮ್ಮ ಧಣಿಗಳ ಪಾಲಿನ ಅಪರೂಪದ ವಸ್ತು ಮತ್ತೆ ಅವರಿಗೆ ದೊರಕದೆ ಆ ನೋವು ಆಪಾದನೆ ಹೊರಿಸಿದ ಧಣಿಗಳು ಅನುಭವಿಸಲಿ ಎಂಬ ಉಪೇಕ್ಷೆಯು ಇದಕ್ಕೆ ಕಾರಣವಿರಬಹುದು. | 4 |
| 51. | ನಿರೂಪಕರ ಕೊಡಲಿ ಸುಳ್ಳು ಹೇಳಿ ಕದ್ದುಕೊಂಡು ಹೋಗಬೇಕಾದಷ್ಟು ಅಮೂಲ್ಯವಾದುದೇನೂ ಆಗಿರಲಿಲ್ಲ. ಕೆರೆ ಕೆಲಸಕ್ಕೆಂದು ಬಂದಿದ್ದ ಮಣ್ಣು ಒಡ್ಡರು ಯರ್ರಾಬಿರ್ರಿ ಜಪ್ಪಿ ಕೊಡಲಿಯೆಂದು ಗೊತ್ತಾಗದಷ್ಟು ಹಾಳುಮಾಡಿದ್ದರು. ಹಾಗಾಗಿ ಅದರ ಆಕಾರ ಸುತ್ತಿಗೆಯಂತೆ ಕಾಣುತ್ತಿತ್ತು. ಅದರಲ್ಲಿ ದುರ್ಗಪ್ಪ ಮರ ಹೇಗೆ ಕಡಿಯುವನೋ ಎಂದು ಅನುಮಾನಿಸುವ ಲೇಖಕರು, ಏನೇ ಎರಲಿ ಅವನೇ ಹುಡುಕಿ ತೆಗೆದುಕೊಂಡು ಹೋಗಿದ್ದರಿಂದ ಹಾಗು ಅದನ್ನು ಅವನು ಕದ್ದರೂ ನಿರೂಪಕರಿಗೆ ಕೊಡಲಿ ಹೋಯ್ತೆಂದು ದುಃಖವಾಗುತ್ತಿರಲಿಲ್ಲವಾದ್ದರಿಂದ ನಿರೂಪಕರು ಕೊಡಲಿ ವಸೂಲಿ ಮಾಡಲು ಹೋಗಲಿಲ್ಲ. | 4 |
| 52. | ಖಾನ್ ಸಾಹೇಬರು, ನಮಗೇನು ಈ ನಾಯಿಗಳನ್ನು ಕಂಡರೆ ಪ್ರೀತೀನಾ? ಎನ್ನುತ್ತಾ ಅವುಗಳನ್ನು ಎರಾಡಿಕೇಟ್ ಮಾಡೋದಕ್ಕೆ ಕೈಲಾದದ್ದನ್ನೆಲ್ಲಾ ಮಾಡಿದ್ದೇನೆ ಎನ್ನುತ್ತಾರೆ.ನಾಯಿಗಳನ್ನು ಶೂಟ್ ಮಾಡಿಸಿದ್ದೇನೆ, ಪಾಯ್ಸನ್ ತರಿಸಿ ಹಾಕಿಸಿದ್ದೇನೆ, ಪಾಯ್ಸನ್ ಅನ್ನೂ ಕಲಬೆರಕೆ ಮಾಡ್ತಾರೆ, ಈ ವರ್ಷ ಇನ್ನೂರು ಮುನ್ನೂರು ನಾಯಿಗಳನ್ನು ಸಾಯಿಸಿದ್ದೇನೆ, ಆದರೂ ನಾಯಿಗಳನ್ನು ಹೊರಗಡೆಯಿಂದ ಲಾರಿಯಲ್ಲಿ ತುಂಬಿಕೊಂಡು ಬಂದು ರಾತ್ರೋರಾತ್ರಿ ಬಿಟ್ಟುಹೋಗುವುದರಿಂದ ನಿಯಂತ್ರಣ ಸಾಧ್ಯವಾಗುತ್ತಿಲ್ಲ ಎಂದು ಅಸಹಾಯಕತೆ ವ್ಯಕ್ತಪಡಿಸುತ್ತಾರೆ. | 4 |
| 53. | ಡ್ರೈವರ್ ಅಬ್ಬಾಸ್ ತನ್ನ ಬೀಡಿ ಸೇದುವ ತೆವಲಿನಿಂದ ಕ್ಲೀನರ್ ಕೃಷ್ಣನಿಗೆ ಲಾರಿ ಸ್ಟೇರಿಂಗ್ ಕೊಟ್ಟು ಬೀಡಿ ಹತ್ತಿಸಿಕೊಂಡು ದಂ ಎಳೆಯುತ್ತಾ, ಹೊಗೆ ಬಿಟ್ಟು ತಲೆ ಎತ್ತಿ ನೋಡುವಷ್ಟರಲ್ಲಿ ಲಾರಿ ಎದುರು ಮರದ ದೊಡ್ಡ ಕಾಂಡ ನುಗ್ಗುತ್ತಿರುವುದು ಕಂಡು ಕೂಗುತ್ತಾ ಸ್ಟೇರಿಂಗಿಗೆ ಕೈ ಹಾಕಿ ಲಾರಿ ಮೂತಿಯನ್ನು ತಿರುಗಿಸಲು ಪ್ರಯತ್ನಿಸಿದ್ದು, ಅಪರೂಪಕ್ಕೆ ಸ್ಟೇರಿಂಗ್ ಸಿಕ್ಕಿದ್ದ ಖುಷಿಯಲ್ಲಿ ಕ್ಲೀನರ್ ಸ್ಟೇರಿಂಗ್ ಅನ್ನು ಬಿಗಿಮುಷ್ಠಿಯಲ್ಲಿ ಹಿಡಿದಿದ್ದ ಕಾರಣ, ಅಲ್ಲದೇ ಗಾಬರಿಯಲ್ಲಿ ಅಬ್ಬಾಸಿಗೆ ಬ್ರೇಕು ಹಾಕಲು ಮರೆತುಹೋದದ್ದು, ಕೊನೆಗೆ ಲಾರಿ ಮರಕ್ಕೆ ಡಿಕ್ಕಿ ಹೊಡೆದ ಕೂಡಲೆ ಹಿಂದುಗಡೆ ಇದ್ದ ಅಪಾರ ತೂಕದ ದಿಮ್ಮಿಗಳು ಕ್ಯಾಬಿನ್ ಮುರಿದು ಮುನ್ನುಗ್ಗಿ ಇಬ್ಬರೂ ಸತ್ತು ಹೋದರು. ಹೀಗಾಗಿ ಆನೆ ಇವರಿಬ್ಬರ ಸಾವಿಗೆ ಕಾರಣವಲ್ಲ. ಅಲ್ಲದೇ ಆ ಸಮಯದಲ್ಲಿ ಇದೇ ಕಳ್ಳ ನಾಟಾಗಳನ್ನು ಇಳಿಸಲು ಆನೆ ವೇಲಾಯುಧನ ಜೊತೆ ಶಿವೇಗೌಡರ ಸಾಮಿಲ್ಲಿನಲ್ಲಿ ಕಾಯುತ್ತಿತ್ತು. | 4 |
| 54. | ನಾಗರಾಜನ ನಿಗೂಢ ಕಣ್ಮರೆ ಹಲವು ಊಹಾಪೋಹಗಳಿಗೆ ಕಾರಣವಾಯಿತು. ಪೋಲೀಸರು ಕೃಷ್ಣೇಗೌಡನ ಆನೆಯೇ ಅವನನ್ನು ದುರ್ಗಮವಾದ ಕಾಡಿನಲ್ಲಿ ನೆಲಕ್ಕೆ ಹಾಕಿ ತಿಕ್ಕಿದೆ ಎಂದು ಶಂಕಿಸಿ ಕೊನೆಗೆ 'ಕೋವಿ ಸಿಕ್ಕಿದೆ ಹೆಣ ಸಿಕ್ಕಿಲ್ಲ ಎಂದು | 4 |

| | | |
|---|---|---|
| | ಮಹಜರು ಬರೆದುಕೊಂಡರು. ಕೆಲವರು ನಾಗರಾಜನಿಗೆ ಮನಃಪರಿವರ್ತನೆಯಾಗಿ ಕೋವಿ ಎಸೆದು ಧರ್ಮಸ್ಥಳದ ಬಸ್ಸು ಹತ್ತಿದನೆಂದೂ,ತಲೆ ಬೋಳಿಸಿಕೊಂಡು ಓಡಾಡುತ್ತಿರುವುದನ್ನು ಕಂಡೆವೆಂದೂ, ಕೆಲವರು ಆತ ಸಾರ್ವಜನಿಕ ಸಭೆಯಲ್ಲಾದ ಅವಮಾನ ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡಿರಬಹುದೆಂದೂ, ಇನ್ನೂ ಕೆಲವರು ಕಳ್ಳಸಾಗಣೆದಾರ ಗಂಗಾಧರನ ಗ್ಯಾಂಗೇ ಅವನನ್ನು ಖೂನಿ ಮಾಡಿ ಹೆಣ ನಾಪತ್ತೆ ಮಾಡಿರಬೇಕೆಂದೂ,ಗಂಗಾಧರನ ಕಾರನ್ನು ನಿಲ್ಲಿಸಿ ಒಳಗೇನಿದೆ ಎಂದು ಚೆಕ್ ಮಾಡಲು ಇಣುಕಿದಾಗ ತಲೆ ಸಿಕ್ಕಿಸಿಕೊಂಡು ವಿಲವಿಲನೆ ಒದ್ದಾಡಿಕೊಂಡಿದ್ದ ನಾಗರಾಜನನ್ನು ಎಳೆದುಕೊಂಡು ಚಾರ್ಮಾಡಿ ಕಡೆ ಹೋದದ್ದನ್ನು ಕಂಡೆವೆಂದು ಕೆಲವರು ಹೇಳಿದರು. ಕೊನೆಗೆ ಇಲಾಖೆಯವರು ಹಿಂದಿರುಗಿ ಬರುವಂತೆ ಪತ್ರಿಕೆಗಳಲ್ಲಿ ಜಾಹೀರಾತು ನೀಡಿ ಆತನ ನಿರೀಕ್ಷೆಯಲ್ಲಿದ್ದರು. | |
| 55. | (ಕವಿ,ಕೃತಿ,ಪದ್ಯ– 1 ಅಂಕ, ಹಿನ್ನಲೆ ಸಂದರ್ಭ- 1 ಅಂಕ, ಭಾವಾರ್ಥ ವಿವರಣೆ – 2 ಅಂಕ, ಸ್ವಾರಸ್ಯ -1 ಅಂಕ)<br>ನಾಗಚಂದ್ರ,ಶ್ರೀರಾಮಚಂದ್ರಚರಿತಪುರಾಣ, ಕದಡಿದ ಸಲಿಲಂ ತಿಳಿವಂದದೆ<br>ರಾವಣನು ಯುದ್ಧ ಸನ್ನದ್ಧನಾಗುವ ಮುನ್ನ ಶಾಂತಿಜಿನಭವನವನ್ನು ತಲುಪಿ ಅನನ್ಯ ಭಕ್ತಿಯಿಂದ ಬಹುರೂಪಿಣೀ ವಿದ್ಯೆಯನ್ನು ಒಲಿಸಿಕೊಳ್ಳಲು ಪ್ರಯತ್ನಿಸುತ್ತಾನೆ.ಅವನು ಧ್ರುವಮಂಡಲದಂತಹ ನಿಶ್ಚಲ ಭಕ್ತಿಯಿಂದ, ದಿವ್ಯಮಂತ್ರಗಳಿಂದ ವಿದ್ಯೆಯನ್ನು ಒಲಿಸಿಕೊಂಡ ಸಂದರ್ಭದ ಚಿತ್ರಣವಿದು.<br>“ಮುಂಗಾರಿನ ಮಳೆಯ ಸಂದರ್ಭದಲ್ಲಿ ಸಿಡಿಲಿನ ಆವೇಶ, ಆರ್ಭಟಗಳು ಗಗನದಲ್ಲಿ ಉಂಟುಮಾಡುವ ದೃಶ್ಯವನ್ನು ಮೀರಿಸುವಂತೆ ಬಹುರೂಪಿಣೀ ವಿದ್ಯೆಯು ಯಮನ ನಾಲಗೆಯೆ ನುಡಿಯುವಂತೆ ‘ಆಜ್ಞಾಪಿಸು ಆಜ್ಞಾಪಿಸು’ ಎಂದು ಕೈಗಳನ್ನು ಚಾಚಿ ರಾವಣನಿಗೆ ಪ್ರತ್ಯಕ್ಷವಾಗಿ ಎದಿರುಗೊಂಡು ಕೇಳಿತು. ”<br>ಯುದ್ಧ ಸನ್ನದ್ಧ ರಾವಣನು ಒಲಿಸಿಕೊಂಡ ವಿದ್ಯೆಯು ಪ್ರಾಕೃತಿಕ ಶಕ್ತಿಯನ್ನೂ ಮೀರಿಸಿದ, ಯಮಸದೃಶ ಶಕ್ತಿಗೆ ಸಮಾನವಾದುದಾಗಿತ್ತು ಎಂಬುದನ್ನು ಕವಿ ಅದ್ಭುತವಾಗಿ ವರ್ಣಿಸಿದ್ದಾನೆ. | 5 |
| 56. | ದ.ರಾ.ಬೇಂದ್ರೆ ಕೃತಿ: ಮುಕ್ತಕಂಠ, ಪದ್ಯ:ಬೆಳಗುಜಾವ –ಒಂದು ವಿಶಿಷ್ಟ ರಚನೆ.<br>ಪ್ರಕೃತಿಯ ಜೊತೆಗಿನ ಅನುಸಂಧಾನದ ಮೂಲಕ ಬೆಳಗಿನ ಸೌಂದರ್ಯವನ್ನು ವರ್ಣಿಸುತ್ತಲೇ, ಯೌವನ ಮಾನವ ಜೀವನದ ಬೆಳಗುಜಾವ, ಹಾಗಾಗಿ ಅದರಲ್ಲಿ ಕ್ರಿಯಾಶೀಲರಾಗಿ ಬದುಕಿನ ಸಫಲತೆಯನ್ನು ಕಾಣಬೇಕೆಂದು ಕವಿ ಕರೆಕೊಟ್ಟಿದ್ದಾರೆ.<br>“ಕವಿತೆಯು ಮೊದಲಿಗೆ ದಿನದ ಆರಂಭವನ್ನು, ಬದುಕಿನ ಆರಂಭವಾದ ಯೌವನವನ್ನು ಸೂಚಿಸುತ್ತಾ ಯುವಕರಿಗೆ ಎದ್ದೇಳುವಂತೆ ಎಚ್ಚರಿಸುತ್ತದೆ. ಕವಿ ಯುವಕರಿಗೆ ಪ್ರೀತಿಯಿಂದ ‘ಏಳು ಚಿನ್ನ’, ಬೆಳಗಾಯ್ತು ಅಣ್ಣ’ ಎಂದು ಗೆಳೆಯಭಾವದಲ್ಲಿ ಎಬ್ಬಿಸಿ, ಪ್ರಕೃತಿಯ ಸೊಬಗನ್ನು ಕಣ್ಣು ತೆರೆದು ನೋಡು ಎಂದು ಕರೆಕೊಡುತ್ತಾರೆ. ಪೂರ್ವ ದಿಕ್ಕಿನಲ್ಲಿ ಸೂರ್ಯ ಉದಯಸಿ ಬೆಳಕು ಮೂಡಿದಂತೆ ನಿನ್ನ ಬದುಕಿನಲ್ಲಿಯೂ ಅಂಧಕಾರ ತೊಲಗಿ ಹೊಸಬೆಳಕು ಮೂಡಲೆಂದು ಆಶಿಸಿದ್ದಾರೆ. ಜೀವನಾಕಾಶವೆಂಬ ಬಣ್ಣದ ಲೋಕದಲ್ಲಿ ವಿಹರಿಸುವಂತೆ ಕರೆಕೊಟ್ಟಿದ್ದಾರೆ. ಜೇನುನೊಣಗಳ ಹಗ್ಗಕ್ಕೆ ಹೂಬಾಣ ಹೂಡಿ ‘ಝುಂ’ ಎಂದು ಬಾಣ ಪ್ರಯೋಗಿಸಿದ ಮನ್ಮಥನ ಆಗಮನವಾಗಿದೆ.ಯೌವನ ಅಂಥ ರೋಮಾಂಚನದ, ಚಂಚಲತೆಯ ಗುಣಗಳುಳ್ಳದ್ದು, ಪ್ರಕೃತಿಗೆ, ಗುಡಿಗೆ ಬೆಳಕೆಂಬ ಬೇಟೆಗಾರ ಹೇಗೆ ಬಲೆ ಬೀಸಿದಂತೆ ಆವರಿಸುವುದೋ ಹಾಗೆ ಯೌವನಕ್ಕೂ ಆಕರ್ಷಣೆ ಆವರಿಸುವ ಕಾಲವಾಗಿದೆ.”<br>ಬೆಳಕಿನ ಆಗಮನದೊಂದಿಗೆ ಪ್ರಕೃತಿಯೇ ಮನ್ಮಥನ ಹೂಬಾಣದೊಂದಿಗೆ ರೋಮಾಂಚನಗೊಳ್ಳುವಿಕೆ, ಬೆಳಕಿನ ಬೇಟೆಗಾರನ ಬಲೆಬೀಸುವಿಕೆ- | |

| | | |
|---|---|---|
| | ಯೌವನಕ್ಕೂ ಆಕರ್ಷಣೆ ಆವರಿಸುವ ಕಾಲ ಎಂಬ ಹೋಲಿಕೆಗಳು ಸ್ವಾರಸ್ಯಕರವಾಗಿವೆ. | |
| 57. | ಧುರ-ಯುದ್ಧ ಉದಕ- ನೀರು ವ್ರಜ-ಸಮೂಹ ತ್ರಾಸ-ಕಷ್ಟ, ತೊಂದರೆ | 2 |
| 58. | ಅರಿ-ತಿಳಿ, ಶತ್ರು ನೆರೆ-ಸೇರು,ಪ್ರವಾಹ, ಅಕ್ಕಪಕ್ಕ,ಬಿಳಿಗೂದಲು,<br>ಕಲಿ-ವೀರ, ತಿಳಿ, ಯುಗದ ಹೆಸರು ಅರಸು-ಹುಡುಕು, ರಾಜ | 2 |
| 59. | ತಿಂದಿತು-ತಿನ್ನು, ಮಲಗಿದನು-ಮಲಗು, ಸೋತರು-ಸೋಲು, ಹಾಡಿದಳು-ಹಾಡು | 2 |
| 60. | ದಿಟ್ಟಿ-ದೃಷ್ಟಿ, ಸಂಜೆ-ಸಂಧ್ಯಾ, ಆಗಸ-ಆಕಾಶ, ರಾಯ-ರಾಜ | 2 |
| 61. | ಮೌಲ್ಯಮಾಪಕರ ವಿವೇಚನೆಗೆ ಉದಾ:ಕಾಗದ,ಸಾಬೂನು ಇತ್ಯಾದಿ | 2 |
| 62. | ನಳಿನಾನನೆ-ನಳಿನ, ದೊಡ್ಡಮರ-ದೊಡ್ಡ, ಉಗ್ರಕೋಪ-ಉಗ್ರ, ದುರ್ಜನ-ದುರ್ (ದುಷ್ಟ) | 2 |
| 63. | ನೋವಿನಲ್ಲಿ-ಸಪ್ತಮೀ, ಮನೆಯಿಂದ-ತೃತೀಯ, ಬಸಲಿಂಗನಿಗೆ-ಚತುರ್ಥೀ, ಸಡೆಸಿದವಳು-ಪ್ರಥಮ | 2 |
| 64. | ಮೌಲ್ಯಮಾಪಕರ ವಿವೇಚನೆಗೆ | 2 |
| 65<br>66 | ಪ್ರಬಂಧ ಲೇಖನ<br>(ಪೀಠಿಕೆ-1 ಅಂಕ, ವಿಷಯ ನಿರೂಪಣೆ-3 ಅಂಕಗಳು, ಮುಕ್ತಾಯ- 1 ಅಂಕ)<br><br>(ಭಾಷೆ, ಬರವಣಿಗೆಯ ಶೈಲಿ, ಉದ್ಧರಣಗಳು, ಅಂಕಿಅಂಶಗಳು, ವಿಷಯಮಂಡನೆಗಳನ್ನು ಗಮನಿಸಿ ಮೌಲ್ಯಮಾಪಕರು ವಿವೇಚನಾನುಸಾರ ಅಂಕನಿಗದಿ ಮಾಡುವುದು) | 5<br>5 |
| 67.<br><br>68. | ಪತ್ರಲೇಖನ<br>(ಆರಂಭ(ವಿಳಾಸ)-1 ಅಂಕ, ಪತ್ರದ ಒಡಲು-2 ಅಂಕ, ಮುಕ್ತಾಯ-1 ಅಂಕ)<br>ವ್ಯಾವಹಾರಿಕ ಪತ್ರ- ಇವರಿಂದ,ಇವರಿಗೆ, ಗೌರವಪೂರ್ವಕ ಸಂಬೋಧನೆ, ಪತ್ರದ ಒಡಲು, ಸ್ಪಷ್ಟವಿಷಯನಿರೂಪಣೆ, ಮುಕ್ತಾಯ ಸಂಬೋಧನೆ, ಸಹಿ ದಿನಾಂಕ ಇತ್ಯಾದಿಗಳನ್ನು ಗಮನಿಸಿ ಮೌಲ್ಯನಿಗದಿ ಮಾಡುವುದು ಮೌಲ್ಯಮಾಪಕರ ವಿವೇಚನೆಗೆ ಬಿಟ್ಟಿದ್ದು.<br><br>ವೈಯಕ್ತಿಕ ಪತ್ರ- ಸೂಕ್ತ ಸಂಬೋಧನೆ, ಆತ್ಮೀಯ ನಿರೂಪಣೆ, ಗೌರವಪೂರ್ವಕ ಮುಕ್ತಾಯ, ಸಹಿ ದಿನಾಂಕ, ಹೊರವಿಳಾಸ ಇತ್ಯಾದಿಗಳನ್ನು ಗಮನಿಸಿ ಮೌಲ್ಯನಿಗದಿ ಮಾಡುವುದು ಮೌಲ್ಯಮಾಪಕರ ವಿವೇಚನೆಗೆ ಬಿಟ್ಟಿದ್ದು. | 4<br><br>4 |
| 69.<br>70. | ಗಾದೆಮಾತು ವಿಸ್ತರಣೆ<br>ಗಾದೆಯ ಅರ್ಥ,ಮಹತ್ವ – 1 ಅಂಕ, ವಿವರಣೆ- 2 ಅಂಕ, ಮುಕ್ತಾಯ (ಆಶಯ,ಪ್ರಸ್ತುತತೆ)-1 ಅಂಕ<br>ಒಟ್ಟಾರ ಮೌಲ್ಯನಿಗದಿ - ಮೌಲ್ಯಮಾಪಕರ ವಿವೇಚನೆಗೆ ಬಿಟ್ಟಿದ್ದು. | 4<br>4 |